## ಹೊಸ ಶಿಕ್ಷಣ ನೀತಿ

35 (76)

**ಶ್ರೀ ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರು)**

ಅ) ಹೊಸ ಶಿಕ್ಷಣ ನೀತಿ ಪ್ರಾಥಮಿಕ ಶಾಲೆಗಳಿಗೆ 8ನೇ ತರಗತಿಗೆ ಸೇರ್ಪಡೆ, ಪಿ.ಯು.ಸಿ.ಕಾಲೇಜು ರದ್ಧತಿ, ಸೆಕೆಂಡರಿ ಶಿಕ್ಷಣದಲ್ಲಿ 9,10,11,12 ನೇ ತರಗತಿಗಳ ಅಳವಡಿಕೆ, ಇತ್ಯಾದಿ ಪ್ರಕ್ರಿಯೆಗಳಿಗೆ ಸಂಬಂದಿಸಿದಂತೆ ದಿನಾಂಕ: 1–4–2011 ರಿಂದ 31–10–2012 ರವರೆಗೆ ಜಿಲ್ಲಾ,ತಾಲ್ಲೋಕು ಮಟ್ಟದಲ್ಲಿ ಎಷ್ಟು ಸಭೆಗಳನ್ನು ನಡೆಸಲಾಗಿದೆ (ಸ್ಥಳ ಹಾಗೂ ದಿನಾಂಕಗಳ ವಿವರ ನೀಡುವುದು) ;

ಆ) ಶಾಲಾ ಮಟ್ಟದ ಶೈಕ್ಷಣಿಕ ಸಭೆಗಳನ್ನು ನಡೆಸಿ ಬಿಸಿ ಊಟಕ್ಕೆ ಬೇಕಾದ ಸೊಪ್ಪು, ತರಕಾರಿ, ಶೌಚಾಲಯಗಳಿಗೆ ಬೇಕಾದ ಫಿನಾಯಿಲ್ ತಯಾರಿಕೆ, ಇತ್ಯಾದಿಗಳ ಕುರಿತು ಜಾಗೃತಿ ಶಿಬಿರಗಳನ್ನು ಕ್ರಮಬದ್ದವಾಗಿ ಜಿಲ್ಲಾ/ ತಾಲ್ಲೂಕು ಮಟ್ಟದಲ್ಲಿ ನಡೆಸಲಾಗುತ್ತಿದೆಯೇ (ಶಿವಮೊಗ್ಗ ಗ್ರಾಮಾಂತರ ಕ್ಷೇತ್ರದಲ್ಲಿ ದಿನಾಂಕ: 01.04.2011 ರಿಂದ 31.10.2011 ರವರೆಗೆ ನಡೆಸಲಾದ ಚಟುವಟಿಕೆಗಳ ವಿವರ ನೀಡುವುದು)?

**ಶ್ರೀ ವಿಶ್ವೇಶ್ವರಯ್ಯ ಹೆಗಡೆ ಕಾಗೇರಿ**
**(ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)**

ಅ) ಹೊಸ ಶಿಕ್ಷಣ ನೀತಿಯನ್ನು ಅಧ್ಯಯನ ಮಾಡಿ ವರದಿಯನ್ನು ನೀಡಲು ಪ್ರೊ.ಆರ್. ಗೋವಿಂದ ರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯು ತಯಾರಿಸಿರುವ ವರದಿಯ ಕುರಿತು ಸಾರ್ವಜನಿಕರ ಅಭಿಪ್ರಾಯಗಳನ್ನು ಪಡೆದು ಅಂತಿಮ ಗೊಳಿಸುವ ಪ್ರಕ್ರಿಯೆ ಚಾಲನೆಯಲ್ಲಿದೆ. ಸಮಿತಿಯ ಸಭೆಗಳು ರಾಜ್ಯಮಟ್ಟದಲ್ಲಿ 5 ಸಭೆಗಳನ್ನು ನಡೆಸಲಾಗಿದ್ದು, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಸಭೆಗಳನ್ನು ನಡೆಸಿರುವುದಿಲ್ಲ.

ಆ) ಸಿಆರ್‌ಪಿಗಳು ಕ್ಲಸ್ಟರ್ ಮಟ್ಟದಲ್ಲಿ ನಡೆಸುವ ಪ್ರತಿ ಮಾಸಿಕ ಸಭೆಗಳಲ್ಲಿ ಶೈಕ್ಷಣಿಕ ವಿಷಯಗಳನ್ನು ಚರ್ಚಿಸುವರೊಂದಿಗೆ ಸರ್ಕಾರದ ಪ್ರತಿಷ್ಠಿತ ಯೋಜನೆ ಬಿಸಿಯೂಟ ಕಾರ್ಯಕ್ರಮವನ್ನು ವ್ಯವಸ್ಥಿತವಾಗಿ ಮುನ್ನೆ-ಡಸಲು ಕಾರ್ಯಕ್ರಮಕ್ಕೆ ಬೇಕಾದ ಸೊಪ್ಪು, ತರಕಾರಿಗಳನ್ನು ಬಳಕೆ ಮಾಡುವ ಬಗ್ಗೆ ಹಾಗೂ ಮೂಲಭೂತ ಸೌಲಭ್ಯಗಳಿರುವ ಶಾಲೆಗಳಲ್ಲಿ ಬೆಳೆಸುವ ಬಗ್ಗೆ ಶಿಕ್ಷಕರಿಗೆ ತರಬೇತಿಯನ್ನು ನೀಡಿ ಸಮಾಲೋಚನೆ ನಡೆಸಲಾಗಿದೆ. ಅದಲ್ಲದೆ ಫಿನಾಯಿಲ್ ತಯಾರಿಕೆ ಕುರಿತು ತಿಳುವಳಿಕೆಯನ್ನು ಡಯಟ್ ಸಂಸ್ಥೆಗಳಲ್ಲಿ ನೀಡಲಾಗಿದೆ.

**ಮದ್ದೂರು ಪದವಿಪೂರ್ವ ಕಾಲೇಜಿನಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ**

25 (78)

**ಶ್ರೀಮತಿ ಕಲ್ಪನಾ ಸಿದ್ದರಾಜು (ಮದ್ದೂರು)**

ಅ) ಮದ್ದೂರು ಟೌನ್ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಮೂಲಭೂತ ಸೌಕರ್ಯಗಳಿಲ್ಲದೆ ವಿದ್ಯಾರ್ಥಿ / ವಿದ್ಯಾರ್ಥಿನಿಯರುಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ತೊಂದರೆಯನ್ನು ನಿವಾರಿಸಲು ಸದರಿ ಕಾಲೇಜಿಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು (ವಿವರ ನೀಡುವುದು);

ಇ) ಈ ಕಾಮಗಾರಿಗಳಿಗೆ ತಗಲುವ ಅಂದಾಜು ಮೊತ್ತವೆಷ್ಟು (ವಿವರ ನೀಡುವುದು) ?

**ಶ್ರೀ ವಿಶ್ವೇಶ್ವರಯ್ಯ ಹೆಗಡೆ ಕಾಗೇರಿ**
**(ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು)**

ಅ) ಸರ್ಕಾರಿ ಪದವಿ ಪೂರ್ವ ಕಾಲೇಜು, ಮದ್ದೂರ, ಮಂಡ್ಯ ಜಿಲ್ಲೆ ಈ ಕಾಲೇಜಿನಲ್ಲಿ ಸುಮಾರು 400 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ನಬಾರ್ಡ್ ಸಹಯೋಗದ ಆರ್‌ಐಡಿಎಫ್-12 ಯೋಜನೆಯ-ಡಿ ಹಾಗೂ ರಾಜ್ಯ ಸರ್ಕಾರದ ಅಪೆಂಡಿಕ್ಸ್-ಇ ಯೋಜನೆಯಡಿ ಕಟ್ಟಡ ಮತ್ತು ಕೊಠಡಿಗಳನ್ನು ನಿರ್ಮಾಣ ಮಾಡಲಾಗಿದೆ. ಹಾಲಿ ಪ್ರಯೋಗಾಲಯ